# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.97-2012** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಹುಚ್ಚೇಗೌಡ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 04-08-2022. |

**ಪಾಟೀ ಸವಾಲುಃ ಶ್ರೀ ಎಸ್.ವಿ ವಕೀಲರಿಂದಃ**

ಈಗ ಹಾಜರುಪಡಿಸಿರುವ ನಿಪಿ-24 ಈ ದಾವಾವನ್ನು ಸಲ್ಲಿಸಿದ ನಂತರ ಪಡೆದಿರುವ ಆರ್.ಟಿ.ಸಿ ಆಗಿರುತ್ತದೆ ಎಂದರೆ ಸರಿ. ನಿಪಿ-25 ರಿಂದ 27 ರ ದಾಖಲೆಗಳು ಈ ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳು ಅಲ್ಲ ಎಂದರೆ ಸರಿ. ನಿಪಿ-28 ಮುಟೇಷನ್ ಕಾಫಿಯಲ್ಲಿನ ಆದೇಶ ಈ ದಾವೆಯನ್ನು ಸಲ್ಲಿಸಿದ ನಂತರ ಆದೇಶವಾಗಿರುತ್ತದೆ ಎಂದರೆ ಸರಿ. ನಿಪಿ-29 ದಿ.01-04-2019 ರಿಂದ 23-09-2019 ರವರೆಗಿನ ನಮೂದಿಗೆ ಸಂಬಂಧಿಸಿದ ದಾಖಲೆ ಆಗಿದ್ದು, ಸದರಿ ದಾಖಲೆಯನ್ನು ಸಹ ಈ ದಾವಾ ಸಲ್ಲಿಸಿದ ನಂತರ ಪಡೆದಿರುವ ದಾಖಲೆ ಆಗಿರುತ್ತದೆ ಎಂದರೆ ಸರಿ. ನಿಪಿ-30 ಪಹಣಿ ಪತ್ರಿಕೆಯಲ್ಲಿ ದಾವಾ ಸ್ವತ್ತು ಹುಣಸೂರು-ಬೇಗೂರು ರಸ್ತೆಗೆ ಭೂ ಸ್ವಾಧೀನವಾಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಭೂ-ಸ್ವಾಧೀನವಾಗಿ 0.8 ಗುಂಟೆ ಸ್ವತ್ತು ಉಳಿರುತ್ತದೆ ಎಂದು ನುಡಿಯುತ್ತಾರೆ. ಭೂ-ಸ್ವಾಧೀನವಾದ ನತಂರ 0.8 ಗುಂಟೆ ಸ್ವತ್ತು ಉಳಿದಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನಾನು ದಾವಾ ಸಲ್ಲಿಸಿರುವ ಸ್ವತ್ತಿನ ವಿಸ್ತೀರ್ಣ 0.4 ಆಗಿದ್ದು, ಸದರಿ ಸ್ವತ್ತು ನಿಪಿ-30 ರ ಪ್ರಕಾರ ಭೂ-ಸ್ವಾಧೀನವಾಗಿರುವುದರಿಂದ ಯಾವುದೇ ಸ್ವತ್ತು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-31 ರಲ್ಲಿ 1997-98, 1998-99 ನೇ ಸಾಲಿನಲ್ಲಿ ಭೂ-ಸ್ವಾಧೀನ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಅನಂತರ ದೇವೀರಮ್ಮ ಹುಚ್ಚೇಗೌಡ ಎಂದು ನಾವು ಕಂದಾಯ ಅಧಿಕಾರಿಗಳೊಂದಿಗೆ ಶರೀಕಾಗಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಈಗಾಗಲೇ ರಸ್ತೆಗೆ ಭೂ-ಸ್ವಾಧೀನವಾಗಿರುವುದರಿಂದ ನಿಪಿ-33 ಅನ್ನು ಕಂದಾಯ ಅಧಿಕಾರಿಗಳೊಂದಿಗೆ ಶರೀಕಾಗಿ ಸೃಷ್ಟಿಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-35 ರಿಂದ 37 ರವರೆಗಿನ ದಾಖಲೆಗಳು ಈ ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳು ಅಲ್ಲ ಎಂದರೆ

ಸರಿಯಲ್ಲ. ನಾನು ಈ ಹಿಂದೆ ಇದೇ ಪ್ರತಿವಾದಿಗಳ ವಿರುದ್ಧ ಓ.ಎಸ್.131/1998 ರಂತೆ ದಾವೆಯನ್ನು ದಾಖಲು ಮಾಡಿದ್ದೆನು ಎಂದರೆ ಸರಿ. ಸದರಿ ದಾವಾವು ನಿಪಿ–22 ರಂತೆ ವಜಾಗೊಂಡಿರುತ್ತದೆ ಎಂದರೆ ಸರಿ. ನಾನು ಮಾಲೀಕತ್ವ ಮತ್ತು ಶಾಶ್ವತ ನಿರ್ಭಂಧಕಾಜ್ಞೆ ಕೋರಿ ಸಲ್ಲಿಸಿದ್ದ ದಾವಾವು ನಾನು ಸ್ವಾಧೀನದಲ್ಲಿ ಇಲ್ಲ ಎಂದು ವಜಾಕರಿಸಿರುತ್ತದೆ ಎಂದರೆ ಸರಿಯಲ್ಲ. ಈಗಾಗಲೇ ನ್ಯಾಯಾಲಯವು ನಾನು ಸಲ್ಲಿಸಿದ್ದ ದಾವಾವು ವಜಾಕರಿಸಿ ಅಂತಿಮ ಆದೇಶ ಮಾಡಿದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ನೀಡಲು ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**